## ಎಚ್ಐವಿ ಸೋಂಕು; ಹೊಸ ಪ್ರಯತ್ನ

ಮಾರಣಾಂತಿಕ ಎಚ್ಐವಿ ವಿರುದ್ಧ ವಿಜ್ಞಾನಿಗಳು ಮೇಲುಗೈ ಸಾಧಿಸಿದ್ದಾರೆ. ದೇಹ ಹೊಕ್ಕ ಎಚ್ಐವಿ ವೈರಾಣು ಜೀವಕೋಶಗಳ ಮೇಲೆ ದಾಳಿ ನಡೆಸುತ್ತವೆ. ಸ್ವಾಭಾವಿಕ ಜೀವಕೋಶಗಳಿಗೂ ಎಚ್ಐವಿ ಸೋಂಕು ತಗಲುತ್ತದೆ. ಆದರೆ ಹೀಗೆ ಎಚ್ಐವಿ ಸೋಂಕಿಗೀಡಾದ ಜೀವಕೋಶಗಳನ್ನೇ ನಾಶಪಡಿಸುವ ಮೂಲಕ ಎಚ್ಐವಿ ವಿರುದ್ಧ ಹೋರಾಡಲು ವಿಜ್ಞಾನಿಗಳು ಹೊಸ ಪ್ರಯತ್ನ ನಡೆಸಿದ್ದಾರೆ.

‘ಈ ಹೊಸ ಸಂಶೋಧನೆಯ ಪ್ರಕಾರ ‘ಆತ್ಮಹತ್ಯಾ ವಂಶವಾಹಿ ಚಿಕಿತ್ಸೆ’ ಮೂಲಕ ಔಷಧೋಪಚಾರದ ಮೂಲಕ ಎಚ್ಐವಿ ಸೋಂಕಿತ ಜೀವಕೋಶಗಳನ್ನು ಹುಡುಕಿ ಅವುಗಳನ್ನು ಸಾಯಿಸುವ ಉದ್ದೇಶ ಹೊಂದಿದೆ. ಈ ರೀತಿ ಸೋಂಕಿತ ಜೀವಕೋಶಗಳನ್ನು ನಾಶಪಡಿಸುವ ಮೂಲಕ ಸ್ವಲ್ಪಮಟ್ಟಿಗಾದರೂ ಎಚ್ಐವಿ ವೈರಾಣುವಿನ ಮೇಲೆ ಹತೋಟಿ ಸಾಧಿಸಬಹುದು’ ಎಂದು ಯುಎಸ್‌ಸಿ ವಿಟರ್ಬಿ ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಡಾ. ಪಿನ್ ವ್ಯಾಂಗ್ ಅವರು ಹೇಳುತ್ತಾರೆ.

ಔಷಧದ ಮೂಲಕ ಕೇವಲ ಶೇ.35ರಷ್ಟು ಎಚ್ಐವಿ ವೈರಾಣು ನಿವಾರಣೆಯಾಗುತ್ತದೆ. ಆದರೆ ಈ ಸಂಶೋಧನೆ ಇನ್ನೂ ಪ್ರಯೋಗಾಲಯದಲ್ಲೇ ಇರುವುದರಿಂದ ಕಾರ್ಯರೂಪಕ್ಕೆ ಬರುವ ದಿನಗಳು ಬಹಳ ದೂರವೇ ಇದೆ.

## ತಾಯಂದಿರಿಗೆ ಟಿಪ್ಸ್

ಮೊಲೆ ಹಾಲು ಉಣಿಸಿದ ಬಳಿಕ ತಾಯಂದಿರು ತಮ್ಮ ಮಗುವನ್ನು ಹೊಟ್ಟೆಯ ಮೇಲೆ ಸ್ವಲ್ಪ ಹೊತ್ತು ಮಲಗಿಸುವುದು ಬಹಳ ಒಳ್ಳೆಯದು. ಇದರಿಂದ ಚಿಕ್ಕವಯಸ್ಸಿನಲ್ಲೇ ಮಕ್ಕಳಲ್ಲಿ ಬೊಜ್ಜು ಬೆಳೆಯುವುದನ್ನು ತಡೆಗಟ್ಟಬಹುದು– ಎನ್ನುತ್ತಾರೆ ಸಂಶೋಧಕರು.

ಹೀಗೆ ಹೊಟ್ಟೆಯ ಮೇಲೆ ಮಲಗಿಸುವುದರಿಂದ ಮಗುವಿಗೆ ಇನ್ನೂ ಒಂದು ಲಾಭವಿದೆ. ಮಗುವಿನ ಕತ್ತು ಮತ್ತು ಬೆನ್ನು ಮೂಳೆ ಇನ್ನಷ್ಟು ಸದೃಢವಾಗಲಿದೆ. ಮುಂದೆ ಮಗು ಕುಳಿತುಕೊಳ್ಳುವುದು, ಉರುಳಾಡುವುದು ಮತ್ತು ತೆವಳುವುದನ್ನು ಕಲಿಯಲು ಇದು ಸಹಕಾರಿ!

ಸಿಡ್ನಿ ಯೂನಿವರ್ಸಿಟಿಯ ಸಂಶೋಧಕರು ಆರೋಗ್ಯ ಇಲಾಖೆಯ ಜತೆ ಸೇರಿ ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯಗಳು ದೃಢಪಟ್ಟಿವೆ. ಮೊದಲ ಬಾರಿಗೆ ತಾಯಿಯಾದ 667 ಮಹಿಳೆಯರನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಮಗುವಿಗೆ ಒಂದು, ಮೂರು, ಐದು, ಒಂಭತ್ತು ಮತ್ತು 12 ತಿಂಗಳಾಗುವವರೆಗೂ ಸತತವಾಗಿ ಪರಿಶೀಲನೆ ನಡೆಸಿ ಈ ಅಂಶಗಳನ್ನು ದೃಢಪಡಿಸಲಾಗಿದೆ.

ಆಸ್ಟ್ರೇಲಿಯಾದಲ್ಲಿ ಚಿಕ್ಕಮಕ್ಕಳಲ್ಲಿ ಬೊಜ್ಜು ಬೆಳೆಯುವುದು ಇತ್ತೀಚೆಗೆ ಹೆಚ್ಚಾಗಿದೆ. ಶೇಕಡಾ 21ರಷ್ಟು ಗಂಡು ಮಕ್ಕಳು ಮತ್ತು ಶೇಕಡಾ 18ರಷ್ಟು ಹೆಣ್ಣು ಮಕ್ಕಳು 2–3 ರ ವಯಸ್ಸಿನಲ್ಲೇ ಬೊಜ್ಜು ಬೆಳೆಸಿಕೊಳ್ಳುತ್ತಿದ್ದಾರೆ ಎನ್ನುವ ಆರೋಗ್ಯ ಇಲಾಖೆಯ ವರದಿಯ ಹಿನ್ನೆಲೆಯಲ್ಲಿ ಈ ಸಂಶೋಧನೆ ಮಹತ್ವ ಪಡೆದಿದೆ.

## ಮಾರಣಾಂತಿಕ ಹೆಪಟೈಟಿಸ್

ಜಗತ್ತಿನಲ್ಲಿ ಪ್ರತಿ 12 ಜನರಲ್ಲೊಬ್ಬರು ಹೆಪಟೈಟಿಸ್ ಬಿ ಅಥವಾ ಸಿ ವೈರಾಣುವಿನ ಸೋಂಕಿನಿಂದ ಬಳಲುತ್ತಿರುತ್ತಾರೆ. ಹೆಪಟೈಟಿಸ್, ಏಡ್ಸ್ ಅಥವಾ ಕ್ಯಾನ್ಸರ್‌ನಷ್ಟೇ ಮಾರಣಾಂತಿಕ ಕಾಯಿಲೆ ಎಂದು ಈಗಾಗಲೇ ವೈದ್ಯ ಜಗತ್ತು ಹೇಳಿದೆ.

ಕಲುಷಿತ ನೀರು ಹಾಗೂ ಆಹಾರದಿಂದ ಹೆಪಟೈಟಿಸ್ ಎ ಅಥವಾ ಇ ವೈರಾಣುಗಳು ಜಾಂಡಿಸ್ ಮೂಲಕ ಬರಬಹುದು. ಆದರೆ ಹೆಪಟೈಟಿಸ್ ಬಿ ಅಥವಾ ಸಿ ವೈರಾಣುಗಳು ವ್ಯಕ್ತಿಯಿಂದ ವ್ಯಕ್ತಿಗೆ ಅಸುರಕ್ಷಿತವಾಗಿ ರಕ್ತದಾನ, ಲೈಂಗಿಕ ಸಂಪರ್ಕ, ಸಂಸ್ಕರಿಸದ ವೈದ್ಯಕೀಯ ಸಾಧನಗಳ ಬಳಕೆ, ಕ್ಷೌರಕ್ಕೆ ಒಬ್ಬರು ಬಳಸಿದ ಬ್ಲೇಡನ್ನೇ ಬಳಸುವುದು, ಅಸುರಕ್ಷಿತವಲ್ಲದ ಹಚ್ಚೆ ಹಾಕಿಸಿಕೊಳ್ಳುವುದರಿಂದ ಹಾಗೂ ಹೀಮೊಡಯಾಲಿಸಿಸ್ ಸಂದರ್ಭದಲ್ಲಿ ಸೋಂಕಬಹುದು.

ಹೆಪಟೈಟಿಸ್ ಬಿ ಲಸಿಕೆಯನ್ನು ಹುಟ್ಟಿದ ಮೊದಲ ದಿನದಿಂದಲೇ ನೀಡಬಹುದು. ಏಕೆಂದರೆ ವೈರಾಣುಗಳು ತಾಯಿಯಿಂದ ಮಗುವಿಗೆ ಬಹುಬೇಗನೆ ದಾಟಬಹುದು. ಇದು ಹಲವಾರು ವರ್ಷಗಳ ಕಾಲ ಮೌನವಾಗಿದ್ದು, ಯಾವುದೋ ಒಂದು ಸಮಯದಲ್ಲಿ ಇದ್ದಕ್ಕಿದ್ದಂತೆ ಕಾರ್ಯಶೀಲವಾಗುತ್ತದೆ.

■ ಇಎಸ್‌ಎಸ್

ಮಧುಮೇಹಿಗಳೇ!
ನಿಮ್ಮ ಆರೋಗ್ಯದ ಕಾಳಜಿ ನಮ್ಮದು
ಯಸಾಕಾ
ನಿಮ್ಮ ಭರವಸೆಯ ರಕ್ಷಕ
- 12 ಅತ್ಯಮೂಲ್ಯ, ದೀರ್ಘ ಕಾಲ ಪರೀಕ್ಷಿಸಲ್ಪಟ್ಟ ದಿವ್ಯ ಗಿಡಮೂಲಿಕೆಗಳ ಸಂಯೋಜನೆ
- ಅಮೂಲ್ಯ ಅಂಗಗಳಾದ ಕಿಡ್ನಿ, ಕಣ್ಣು ಹಾಗೂ ನರಗಳಿಗೆ ಆಗುವ ಅಪಾಯ ತಪ್ಪಿಸುತ್ತದೆ.
- ಗಾಯಗಳನ್ನು ಗುಣಪಡಿಸುವ ಶಕ್ತಿಯ ವರ್ಧನೆ
- ಜೀರ್ಣ ಕ್ರಿಯೆಯನ್ನು ಚುರುಕುಗೊಳಿಸುತ್ತದೆ
- ಜೀವರಕ್ಷಕ – ರೋಗ ನಿರೋಧಕ ಶಕ್ತಿ ವರ್ಧನೆ
- ಪ್ಯಾನಕ್ರಿಯಾಸ್ ಗ್ರಂಥಿಯನ್ನು ಪ್ರಚೋದಿಸುತ್ತದೆ
- ಡಯಾಬಿಟಿಸ್‌ನ ಅಡ್ಡ ಪರಿಣಾಮಗಳಿಂದ ರಕ್ಷಣೆ
- ಸುಸ್ತನ್ನು ಹೋಗಲಾಡಿಸುವುದು
- ಶಕ್ತಿಭರಿತರನ್ನಾಗಿ ಕ್ರಿಯಾಶೀಲರನ್ನಾಗಿ ಇಡುವುದು.

A quality product from
Simandhar
E-Mail:simandharherbal@yahoo.com
www.simandharherbal.com
PHONE:022-24380299




ಎಲ್ಲ ಪ್ರಮುಖ ಮೆಡಿಕಲ್ಸ್ ಮತ್ತು ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ
HELP LINE: 9611688499